ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು,ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ7[2]ಪ್ರಾಶಿಅ.ಹೊ.ಶಾ.ಪ್ರಾ.ಅನು.36/2013-14 ದಿನಾಂಕ: 16-09-2013

## ಸುತ್ತೋಲೆ

ವಿಷಯ: ಶಾಶ್ವತ ಅನುದಾನ ರಹಿತವಾಗಿ 1 ರಿಂದ 5 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ /ಮಾತೃಭಾಷೆಯಲ್ಲಿ ಅನುಮತಿ ಪಡೆದು ನಡೆಯುತ್ತಿರುವ ಶಾಲೆಗಳಿಗೆ 2013-14 ನೇ ಸಾಲಿನಿಂದ 6, 7 ಮತ್ತು 8ನೇ ತರಗತಿಗಳಿಗೆ ಆಂಗ್ಲ ಮಾಧ್ಯಮದಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು ಅನುಸರಿಸಬೇಕಾದ ಮಾರ್ಗಸೂಚಿ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.122.ಎಸ್.ಇಎಸ್.2007 ದಿನಾಂಕ:17.05.2007.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.44.ಎಸ್.ಎಲ್.ಬಿ.2007 ದಿನಾಂಕ:03.09.2007.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷದಂತೆ ಈ ವರ್ಷವೂ ಖಾಸಗಿ ಶಿಕ್ಷಣ ಸಂಸ್ಥೆಗಳು 1 ರಿಂದ 5ನೇ ತರಗತಿ ಕನ್ನಡ ಮಾಧ್ಯಮದಲ್ಲಿ /ಮಾತೃಭಾಷೆಯಲ್ಲಿ ಶಾಲೆ ಪ್ರಾರಂಭಿಸಿ 6, 7, ಮತ್ತು 8 ನೇ ತರಗತಿಗಳಿಗೆ ಆಂಗ್ಲ ಮಾಧ್ಯಮದಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದು ಸರಿಯಷ್ಟೆ. ಹೊಸ ಶಾಲೆಗಳನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡುವಾಗ ನಿಯಮಾನುಸಾರ ಅರ್ಜಿ ನಮೂನೆಯಲ್ಲಿರುವಂತೆ/ಚೆಕ್‌ಲಿಸ್ಟ್ ನಲ್ಲಿರುವ ಎಲ್ಲಾ ಮಾಹಿತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಲ್ಲಿಸಬೇಕಾಗುತ್ತದೆ.

ಉಲ್ಲೇಖ [1] ರ ಅಧಿಸೂಚನೆಯಲ್ಲಿ ಹೊಸ ಶಾಲೆ ಪ್ರಾರಂಭಿಸಲು ಶಿಕ್ಷಣ ಕಾಯ್ದೆ ನಿಯಮದ ಮಾನದಂಡಗಳ ಅನ್ವಯ ಅನುಮತಿ ನೀಡಲು ನೊಂದಣಿ ಪ್ರಾಧಿಕಾರಕ್ಕೆ ಸೂಚಿಸಿದೆ. ಇದುವರೆವಿಗೂ ಸಲ್ಲಿಸಿರುವ ಪ್ರಸ್ತಾವನೆಗಳ ಪರಿಶೀಲನೆಯಲ್ಲಿ ಗಮನಿಸಿರುವಂತೆ ಜಿಲ್ಲಾ ಸಮಿತಿಯು ನಿಖರ ಮತ್ತು ಸ್ಪಷ್ಟ ಅಭಿಪ್ರಾಯದ ಸ್ಥಳ ಪರಿಶೀಲನಾ ವರದಿ ನೀಡದಿರುವುದು, ಉಪನಿರ್ದೇಶಕರು ನಿಯಮಗಳಂತೆ ಮಾಹಿತಿ ನೀಡದಿರುವುದು ಮತ್ತು ಜಿಲ್ಲಾ ಮಟ್ಟದ ತ್ರಿಸದಸ್ಯ ಸಮಿತಿಯ ಸ್ಪಷ್ಟ ಅಭಿಪ್ರಾಯ ನೀಡದಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಗಧಿತ ಅವಧಿಯೊಳಗೆ ಹೊಸ ಶಾಲೆ ನೊಂದಾವಣೆಗಾಗಿ ಅನುಮತಿ ನೀಡಲು ವಿಳಂಬವಾಗುತ್ತಿದೆ.

ನಾಗರೀಕ ಸೇವಾ ಖಾತ್ರಿ ಅಧಿನಿಯಮ -2011 (ಸಕಾಲ) ಜಾರಿಗೆ ಬಂದಿದ್ದು ಈ ನಿಯಮದಡಿಯಲ್ಲಿ 2014-15 ನೇ ಸಾಲಿಗೆ ಹೊಸ ಶಾಲೆ ನೊಂದಣಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿರುತ್ತದೆ. ಇಂತಹ ಪ್ರಸ್ತಾವನೆಗಳು ಕ್ರಮಬದ್ಧವಾಗಿದ್ದಲ್ಲಿ 90 ಕೆಲಸದ ದಿನಗಳೊಳಗೆ ಇತ್ಯರ್ಥಪಡಿಸಬೇಕಿರುತ್ತದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಉದ್ದೇಶಿತ ಶಾಲಾ ಆಡಳಿತ ಮಂಡಳಿಯಿಂದ ಅರ್ಜಿ ಸ್ವೀಕರಿಸಿದ ನಂತರ 20 ದಿನಗಳ ಒಳಗಾಗಿ ಅಥವಾ ದಿ:23/11/2013 ರೊಳಗೆ ಯಾವುದು ಮೊದಲು ಬರುವುದೋ ಆ ದಿನಾಂಕದೊಳಗೆ ಸಂಬಂಧಿಸಿದ ಉಪನಿರ್ದೇಶಕರ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು.. ಹೊಸ ಶಾಲಾ ನೊಂದಣಿಗೆ ಅರ್ಜಿ ಸಲ್ಲಿಸಲು ದಿನಾಂಕ:31/10/2013 ಕೊನೆಯ ದಿನಾಂಕವಾಗಿರುತ್ತದೆ.

ಸ್ವೀಕರಿಸಿದ ಅರ್ಜಿಗಳನ್ನು ಸಕಾಲದಡಿ ನೋಂದಾಯಿಸಿ, ಜಿ.ಎಸ್.ಸಿ ಸಂಖ್ಯೆಯನ್ನೊಳಗೊಂಡ ಸ್ವೀಕೃತಿಯ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಉಲ್ಲೇಖ [2] ರ ಸರ್ಕಾರದ ಸುತ್ತೋಲೆಯಲ್ಲಿನ ಅನುಬಂಧ-1 ರ ಹಾಗೂ ಜಿಲ್ಲಾ ಸಮಿತಿಯು ಸುತ್ತೋಲೆಯಲ್ಲಿರುವ ಮೌಲ್ಯಾಂಕ ಪದ್ಧತಿ ಹಾಗೂ ಚೆಕ್‌ಲಿಸ್ಟ್ ಅನ್ವಯ ಮಾಹಿತಿಗಳೊಂದಿಗೆ ಸಮಿತಿಯಲ್ಲಿರುವ ತಂಡದ ಎಲ್ಲಾ ಸದಸ್ಯರು ಕಡ್ಡಾಯವಾಗಿ ಸಹಿ ಮಾಡಿ ಸಲ್ಲಿಸುವುದು. ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಶಿಕ್ಷಣಕಾಯ್ದೆ ನಿಯಮಗಳನ್ವಯ ಪ್ರಸ್ತಾವನೆ ಸಲ್ಲಿಸುವ ವಿವಿಧ ಹಂತಗಳಲ್ಲಿ ಅನುಸರಿಸಬೇಕಾದ ಮಾರ್ಗಸೂಚಿ ವೇಳಾಪಟ್ಟಿಯನ್ನು ಅನುಬಂಧ-1 ಮತ್ತು 2 ರಲ್ಲಿ ವಿವರವಾಗಿ ನೀಡಲಾಗಿದೆ. ಅದರಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ಬೆಂಗಳೂರು/ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು [ಆಡಳಿತ] ರವರಿಗೆ,
2. ಬೆಂಗಳೂರು/ಮೈಸೂರು ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,
3. ಕಛೇರಿ ಪ್ರತಿ.

## ಅನುಬಂಧ--1

ಹೊಸದಾಗಿ ಖಾಸಗಿ ಶಾಶ್ವತ ಅನುದಾನ ರಹಿತ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಅನುಮತಿಸುವಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು:-

**[1] ಜಿಲ್ಲಾ ಮಟ್ಟದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು**

1. ಜಿಲ್ಲಾ ಉಪನಿರ್ದೇಶಕರು[ಆಡಳಿತ] ಹೊಸದಾಗಿ ಶಾಲೆ ಪ್ರಾರಂಭಿಸಲು ಶಿಕ್ಷಣ ಕಾಯ್ದೆ 1995 ಹಾಗೂ ನೋಂದಣಿ ನಿಯಮ ಮತ್ತು, ನಾಲ್ಕರ ಪ್ರಕಾರ ತಮ್ಮ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿಶೀಲನಾ ಸಮಿತಿಯನ್ನು ರಚಿಸುವುದು. [ಹೊಸ ಪ್ರಾಥಮಿಕ ಶಾಲಾ ಪರಿಶೀಲನಾ ಸಮಿತಿ]

   ಜಿಲ್ಲಾ ಪರಿಶೀಲನಾ ಸಮಿತಿಯಲ್ಲಿ ಕೆಳಕಂಡಂತೆ ಸದಸ್ಯರನ್ನು ನೇಮಕ ಮಾಡಿಕೊಳ್ಳುವುದು.

   [ಅ] ಉಪನಿರ್ದೇಶಕರ ಕಛೇರಿಯ ಹಿರಿಯ ಶಿಕ್ಷಣಾಧಿಕಾರಿಗಳು

   [ಆ] ಸಂಬಂಧಿಸಿದ ಡಯಟ್ ಹಿರಿಯ ಉಪನ್ಯಾಸಕರು

   [ಇ] ಶಿಕ್ಷಣ ಮಹಾವಿದ್ಯಾಲಯಗಳು ಇರುವಂತಹ ಜಿಲ್ಲೆಗಳಲ್ಲಿ ಒಬ್ಬ ರೀಡರ್

   [ಈ] ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯ ಹಿರಿಯ ಮುಖ್ಯ ಶಿಕ್ಷಕರು

   ಹೊಸ ಪ್ರಾಥಮಿಕ ಶಾಲೆಗಳ ಮಂಜೂರಾತಿಗೆ ನಿಗಧಿಪಡಿಸಿದ ಅನುಬಂಧ--2 ರಲ್ಲಿನ ವೇಳಾಪಟ್ಟಿಯಂತೆ ಹೊಸ ಪ್ರಾಥಮಿಕ ಶಾಲೆಗಳ ಪ್ರಸ್ತಾಪನೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸಲು ವ್ಯಾಪಕ ಪ್ರಚಾರ ಮಾಡುವುದು. ನಿಗದಿತ ವೇಳಾಪಟ್ಟಿಯ ದಿನಾಂಕದ ನಂತರ ಬರುವಂತಹ ಪ್ರಸ್ತಾವನೆಗಳನ್ನು ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿಯೇ ತಿರಸ್ಕರಿಸುವುದು. ತಿರಸ್ಕರಿಸುವಾಗ ನಿಗದಿತ ಅವಧಿಯೊಳಗೆ ಸಲ್ಲಿಸಿಲ್ಲ ಎಂಬ ಕಾರಣವನ್ನು ಮಾತ್ರ ನೀಡುವುದು.

2. ಹೊಸ ಪ್ರಾಥಮಿಕ ಶಾಲೆಗಳ ಪ್ರಾರಂಭದ ಪ್ರಸ್ತಾವನೆಯನ್ನು ಉಪನಿರ್ದೇಶಕರು, ಜಿಲ್ಲಾ ಪರಿಶೀಲನಾ ಸಮಿತಿಗೆ ನಿಗದಿತ ಸಮಯಕ್ಕೆ ಕಳುಹಿಸಿ ಜಿಲ್ಲಾ ಪರಿಶೀಲನಾ ಸಮಿತಿಯು ಶಿಕ್ಷಣ ಕಾಯ್ದೆ ನಿಯಮಗಳಡಿ ಸ್ಥಳ ಪರಿಶೀಲಿಸಿ ನಿಗದಿತ ಅವಧಿಯೊಳಗೆ ಉಪನಿರ್ದೇಶಕರಿಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ಪರಿಶೀಲನಾ ಸಮಿತಿಯು ವರದಿಯನ್ನು ನೀಡತಕ್ಕದ್ದು.
3. ಜಿಲ್ಲಾ ಪರಿಶೀಲನಾ ಸಮಿತಿಯು ಕೆಳಕಂಡ ಮುಖ್ಯ ಅಂಶಗಳನ್ನು ವಿಶೇಷವಾಗಿ [ಕಡ್ಡಾಯವಾಗಿ] ಪರಿಶೀಲಿಸುವುದು.
4. ಸರ್ಕಾರದ ಸುತ್ತೋಲೆ ದಿ:03.09.2007ರ ಪಟ್ಟಿ-1ರ ಮೌಲ್ಯಾಂಕದ ವಿವರ.

- ಪ್ರಸ್ತಾಪಿತ ಸ್ಥಳದಲ್ಲಿ ಜನ ಸಂಖ್ಯೆ ಪ್ರಮಾಣ ಹಾಗೂ ಈಗಾಗಲೇ ನಡೆಯುತ್ತಿರುವ ಪ್ರಾಥಮಿಕ ಶಾಲೆಗಳನ್ನು ಗಣನೆಗೆ ತೆಗೆದುಕೊಂಡು ಆ ಸ್ಥಳದಲ್ಲಿ ಮತ್ತೊಂದು ಹೊಸ ಶಾಲೆ ಅಗತ್ಯತೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಸಂಸ್ಥೆಯು ಜಿಲ್ಲಾ ಸಂಘ ಸಂಸ್ಥೆಗಳ ನೋಂದಣಿ ಅಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಿಕೊಂಡಿರುವ ಬಗ್ಗೆ ಹಾಗೂ ಸಂಸ್ಥೆಯನ್ನು ಕಾಲ ಕಾಲಕ್ಕೆ ನವೀಕರಿಸಿಕೊಂಡಿರುವ ಬಗ್ಗೆ ಪರಿಶೀಲಿಸುವುದು.
- ಶಿಕ್ಷಕರ ಸೇವಾ ಭದ್ರತೆಯನ್ನು ಮತ್ತು ಬ್ಯಾಂಕ್ ಖಾತೆ ತೆರೆದು ಕನಿಷ್ಠ ವೇತನ ನೀಡುತ್ತಿರುವ ಬಗ್ಗೆ ಹಾಗೂ ಸೇವಾ ಪುಸ್ತಕವನ್ನು ತೆರೆದಿರುವ ಬಗ್ಗೆ ಮಾಹಿತಿ
- ಕಟ್ಟಡ ಮತ್ತು ಮೂಲಭೂತ ಸೌಕರ್ಯ ಒದಗಿಸಿರುವ ಬಗ್ಗೆ ಪರಿಶೀಲಿಸುವುದು. [ಪ್ರತಿ ಮಗುವಿಗೆ 6 ಚದರ ಅಡಿಯಂತೆ].
- ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಶೌಚಾಲಯ ಸೌಲಭ್ಯ ಒದಗಿಸಿರುವುದನ್ನು ಪರಿಶೀಲಿಸುವುದು.
- ಸಂಸ್ಥೆಯ ಆರ್ಥಿಕ ಸದೃಢತೆ ಬಗ್ಗೆ ನಿಯಮ 4[ಬಿ][1] ರಂತೆ ಪರಿಶೀಲಿಸುವುದು.
- ಜಿಲ್ಲಾ ಸಮಿತಿಯ ವರದಿ ಆಧಾರದ ಮೇರೆಗೆ ಉಪನಿರ್ದೇಶಕರು ನಮೂನೆ--2ರಲ್ಲಿ ಎಲ್ಲಾ ಕಾಲಂಗಳನ್ನು ಸೂಕ್ತ ಮಾಹಿತಿಯೊಂದಿಗೆ ತಪ್ಪದೆ ನಮೂದಿಸುವುದು. ಯಾವುದನ್ನೂ ಖಾಲಿ ಬಿಡಬಾರದು. ನಮೂನೆಯಲ್ಲಿನ ಪ್ರತಿ ಮಾಹಿತಿಗೆ ಅನುಬಂಧ ಸಂಖ್ಯೆ ನೀಡಿ ಕಾಲಂನಲ್ಲಿ ನಮೂದಿಸುವುದು. ***[ಲಗತ್ತಿಸಿದೆ, ಹೌದು, ಇಲ್ಲ ಎಂಬಂತಹ ಉತ್ತರಗಳನ್ನು ಬರೆಯಕೂಡದು. ಕಾಲಂನಲ್ಲಿ ಕೇಳಿರುವಂತಹ ಎಲ್ಲಾ ಮಾಹಿತಿಗಳ ಬಗ್ಗೆ ಸ್ಪಷ್ಟ ವಿವರಣೆಯನ್ನು ಪೂರ್ಣವಾಗಿ ನಮೂದಿಸುವುದು]***
- ಶಾಲೆಯ ಕಟ್ಟಡ ಸುರಕ್ಷತೆ ಬಗ್ಗೆ, ಬೆಂಕಿ, ಬಿರುಗಾಳಿ ವಿದ್ಯುತ್ ಅಪಘಾತ ಮುಂತಾದ ಅವಗಡಗಳಿಂದ ಸುರಕ್ಷಿತವಾಗಿರುವ ಬಗ್ಗೆ ಖಚಿತಪಡಿಸಿಕೊಂಡು ದೃಢೀಕರಿಸುವುದು. ಅಗ್ನಿನಂದಕಗಳನ್ನು ಅಳವಡಿಸಿರುವ ಕುರಿತು ಪ್ರಸ್ತಾಪಿಸತಕ್ಕದ್ದು.
- ಶಾಲೆಯ ಮೂಲಭೂತ ಸೌಕರ್ಯಗಳು, ಕಟ್ಟಡ ಮುಂತಾದ ವಿಷಯಗಳು ಸ್ಪಷ್ಟವಾಗಿ ಗೋಚರಿಸುವಂತಹ ಛಾಯ ಚಿತ್ರಗಳು ಹಾಗೂ ಅವುಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಿರಬೇಕು.
- ಸರ್ಕಾರದ ಸುತ್ತೋಲೆ ದಿ:03.09.2007ರಲ್ಲಿನ ಪಟ್ಟಿ-1ರಂತೆ ಪರಿಶೀಲಿಸಿ ವಸ್ತು ನಿಷ್ಠ ಮೌಲ್ಯಾಂಕ ವರದಿ ನೀಡುವುದು.

ಜಿಲ್ಲಾ ಸಮಿತಿಯು ಸಂಬಂಧಿಸಿದ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಯೋಗದೊಂದಿಗೆ ಸ್ಥಳ ಪರಿಶೀಲಿಸುವುದು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಸ್ತಾವನೆಯಲ್ಲಿನ ಎಲ್ಲಾ ದಾಖಲೆಗಳನ್ನು ದೃಢೀಕರಿಸುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿದ ಎಲ್ಲಾ ದಾಖಲೆಗಳನ್ನು ಉಪನಿರ್ದೇಶಕರು ಮೇಲು ಸಹಿ ಮಾಡುವುದು.

ಜಿಲ್ಲಾ ಸಮಿತಿ ವರದಿಯು ಅಸ್ಪಷ್ಟ ಹಾಗೂ ನಿಖರವಾಗಿಲ್ಲದಿದ್ದರೆ ಸಂಬಂಧಿಸಿದ ಜಿಲ್ಲಾ ಸಮಿತಿ ಸದಸ್ಯರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಸಮಿತಿಯು ಸಲ್ಲಿಸಿರುವ ಪ್ರಸ್ತಾವನೆಯನ್ನು ಜಿಲ್ಲಾ ಉಪನಿರ್ದೇಶಕರು, ಕೂಲಂಕಷವಾಗಿ ಎಲ್ಲಾ ದಾಖಲೆಗಳೊಂದಿಗೆ ಪರಿಶೀಲಿಸಿ ಅಧಿಕೃತ ವೇಳಾಪಟ್ಟಿಯಂತೆ ನಮೂನೆ-2ರಲ್ಲಿ ಹಾಗೂ ಸರ್ಕಾರದ ಸುತ್ತೋಲೆ ದಿ:03.09.2007ರ ಅನುಬಂಧ-1ರ ವರದಿಯೊಂದಿಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ನಿರ್ದೇಶಕರು[ಪ್ರಾಥಮಿಕ] ಇವರ ಕಾರ್ಯಾಲಯಕ್ಕೆ ಸಲ್ಲಿಸುವುದು. ನಿಗಧಿತ ಅವಧಿ ನಂತರ ಯಾವುದೇ ಪ್ರಸ್ತಾವನೆಗಳನ್ನು ಸಲ್ಲಿಸಬಾರದು.

➢ ಅಲ್ಲದೇ ಯಾವುದೇ ಹಂತದಲ್ಲಿ ತಪ್ಪಾದ ಹಾಗೂ ಅಪೂರ್ಣ ಮಾಹಿತಿ ಕಳುಹಿಸಿದಲ್ಲಿ **ಅಂತಹ ಅಧಿಕಾರಿಗಳ ವಿರುದ್ಧ ಕರ್ತವ್ಯ ಲೋಪವೆಂದು ಭಾವಿಸಿ ಶಿಸ್ತಿನ ಕ್ರಮ ಜರುಗಿಸಲಾಗುವುದು.** ಇದಕ್ಕಾಗಿ ಪ್ರತಿ ಜಿಲ್ಲೆಯ ಹಲವು ಶಾಲೆಗಳಿಗೆ ಆಯುಕ್ತಾಲಯದಿಂದ ಭೇಟಿ ನೀಡಿ ವಸ್ತು ನಿಷ್ಠತೆ ಬಗ್ಗೆ ಪರಿಶೀಲಿಸಲಾಗುವುದು.

[2] ಆಯುಕ್ತರು / ನಿರ್ದೇಶಕರು[ಪ್ರಾಥಮಿಕ] ಇವರ ಹಂತದಲ್ಲಿ ಪರಿಶೀಲನೆ (ಆಂಗ್ಲ 6, 7, ಮತ್ತು 8 ನೇ ತರಗತಿ ಮಾಧ್ಯಮ) ಜಿಲ್ಲಾ ಉಪನಿರ್ದೇಶಕರಿಂದ ಬಂದಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಿ ಶಿಕ್ಷಣ ಕಾಯ್ದೆ ನಿಯಮದಂತೆ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಅನುಮತಿ ಅಥವಾ ತಿರಸ್ಕರಿಸುವ ಪ್ರಕ್ರಿಯೆಯನ್ನು ನಿಗಧಿತ ಅವಧಿಯೊಳಗೆ ಕೈಗೊಳ್ಳಲಾಗುವುದು.

2014-15 ನೇ ಸಾಲಿಗೆ ಸಂಬಂಧಿಸಿದಂತೆ ಶಾಲೆ ಪ್ರಾರಂಭಿಸಲು ಅನುಮತಿ ದೊರೆತ ಮೇಲೆ ಶೈಕ್ಷಣಿಕ ಸಾಲಿನಲ್ಲಿ ಶಾಲೆ ಪ್ರಾರಂಭಿಸಿರುವ ಬಗ್ಗೆ ನಿಗಾ ವಹಿಸಲು ತಿಳಿಸಿದೆ. ಈ ರೀತಿ ಪ್ರಾರಂಭವಾದ ಶಾಲೆಗಳು 6 ತಿಂಗಳಲ್ಲಿ ಪ್ರಥಮ ಮಾನ್ಯತೆಯನ್ನು ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಿ ಉಪನಿರ್ದೇಶಕರ ಹಂತದಲ್ಲಿ ನಿಯಮಾನುಸಾರ ಕ್ರಮ ವಹಿಸಲು ತಿಳಿಸಿದೆ. ಹಾಗೂ ಖಾಸಗಿ ಶಾಶ್ವತ ಅನುದಾನರಹಿತ ಕನ್ನಡ ಪ್ರಾಥಮಿಕ ಶಾಲೆಗಳನ್ನು ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉಪನಿರ್ದೇಶಕರ ಹಂತದಲ್ಲಿ ಅನುಮತಿಯನ್ನು ನೀಡುತ್ತಿದ್ದು, ಈ ಪ್ರಕ್ರಿಯೆಯೂ ಸಹ ಅನುಬಂಧ-2ರ ವೇಳಾಪಟ್ಟಿಯಂತೆ ಮಾಡಬೇಕಿರುತ್ತದೆ. ಉಲ್ಲೇಖಿತ ಸರ್ಕಾರಿ ಆದೇಶಗಳಂತೆ ಶಾಲೆಗಳಿಗೆ ಅನುಮತಿ ನೀಡುವಾಗ ಹಾಗೂ ಶಿಫಾರಸ್ಸು ಮಾಡುವಾಗ ಹಾಲಿ ಇರುವ ಶಾಲೆಗಳಿಗೆ ಅನಾನುಕೂಲವಾಗದಂತೆ ಆ ಸ್ಥಳದ ಜನಸಂಖ್ಯೆಯನ್ನು ಹಾಗೂ ಕಿರಿಯ ಪ್ರಾಥಮಿಕ ಶಾಲೆಗಳಿಗೆ 1 ಕಿ.ಮೀ ಅಂತರ ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ 3 ಕಿ.ಮೀ ಅಂತರ ಲೆಕ್ಕಚಾರವನ್ನು ಗಮನದಲ್ಲಿಟ್ಟುಕೊಂಡು ನಿಯಮಾನುಸಾರ ಪರಿಗಣಿಸಲು ಸೂಚಿಸಿದೆ. ಶಾಲಾ ಮಂಜೂರಾತಿಯು ಅಗತ್ಯತೆ ಇದ್ದಲ್ಲಿ ಮಾತ್ರ ಪರಿಗಣಿಸತಕ್ಕದ್ದು.

2014-15 ನೇ ಸಾಲಿಗೆ ಅನುಮತಿ ಕೋರಿ ಸಲ್ಲಿಸಿದ ಪ್ರಸ್ತಾವನೆಗಳಲ್ಲಿ ಈ ಕಛೇರಿಯಲ್ಲಿ ಹಾಗೂ ಉಪನಿರ್ದೇಶಕರ ಕಛೇರಿಯಲ್ಲಿ ವಿವಿಧ ಕಾರಣಗಳಿಂದ ತಿರಸ್ಕೃತಗೊಂಡಿದ್ದಲ್ಲಿ ಇಂತಹ ತಿರಸ್ಕರಿಸಿದ ಶಾಲೆಗಳು ಅನಧಿಕೃತವಾಗಿ ಪ್ರಾರಂಭವಾಗದಂತೆ ನಿಗಾ ವಹಿಸಲು ತಿಳಿಸಿದೆ. ಈ ಸಂಬಂಧ ಯಾವುದೇ ರೀತಿಯ ವ್ಯತ್ಯಾಸಗಳಾದಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ರವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಅನುಬಂಧ–2

**ಹೊಸ ಪ್ರಾಥಮಿಕ ಶಾಲೆಗಳಿಗೆ ಮಂಜೂರಾತಿ ನೀಡುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ**

| | | |
|---|---|---|
| 1 | ಹೊಸ ಪ್ರಾಥಮಿಕ ಶಾಲೆಗಳು ಪ್ರಾರಂಭಿಸುವ ನಮೂನೆ–1ರಲ್ಲಿ ನೋಂದಣಿ ಫೀ ಯೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 31-10- 2013 |
| 2 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರುಗಳಿಗೆ ಪ್ರಸ್ತಾವನೆ ಸಲ್ಲಿಸುವ ಕೊನೆಯ ದಿನಾಂಕ | 23-11-2013 |
| 3 | ಜಿಲ್ಲಾ ಪರಿಶೀಲನಾ ಸಮಿತಿ ವರದಿಯೊಂದಿಗೆ ಉಪನಿರ್ದೇಶಕರು ಪ್ರಸ್ತಾವನೆಯನ್ನು ಆಯುಕ್ತರಿಗೆ ಸಲ್ಲಿಸುವ ಕೊನೆಯ ದಿನಾಂಕ | 31-12-2013 |
| 4 | ಆಯುಕ್ತರವರು ಮಂಜೂರಾತಿ/ತಿರಸ್ಕೃತ ಆದೇಶ ನೀಡುವ ಕೊನೆಯ ದಿನಾಂಕ | 31 -01- 2014 |
| 5 | ಹೊಸ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲು ಅನುಮತಿ ಪಡೆದು ನಂತರ ಪ್ರಥಮ ಮಾನ್ಯತೆಗೆ ಮನವಿ ಸಲ್ಲಿಸಲು ಕೊನೆಯ ದಿನಾಂಕ | 31 -08- 2014 |
| 6 | ಉಪನಿರ್ದೇಶಕರು ಪ್ರಥಮ ಮಾನ್ಯತೆ ನೀಡಲು ಕೊನೆಯ ದಿನಾಂಕ | 31 -12- 2014 |

ಸೂಚನೆ:– ಅನುಬಂಧ–2ರ ವೇಳಾಪಟ್ಟಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ವಿವಿಧ ಮಾಧ್ಯಮಗಳ ಮುಖಾಂತರ ವ್ಯಾಪಕ ಪ್ರಚಾರ ಮಾಡುವುದು. ದಿ:31–12–2013 ರ ನಂತರ ಯಾವುದೇ ಹೊಸ ಪ್ರಸ್ತಾವನೆಗಳನ್ನು ಈ ಕಛೇರಿಗೆ ಸಲ್ಲಿಸಬಾರದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ